**ಹೇಗೆ? ನಿಮ್ಮ ಕಲ್ಪನೆಯನ್ನು ಪ್ರಭಾವಿಸಿದ ವ್ಯಕ್ತಿ–ವಿಷಯಗಳು ಯಾವುವು? ನಿಮ್ಮ ಸಾಹಿತ್ಯ ಪ್ರಜ್ಞೆ ಜಾಗೃತವಾಗಿ ರೂಪಗೊಂಡ ರೀತಿ ಯಾವ ಬಗೆಯದು?**

ನಾನು ಹಿಂತಿರುಗಿ ನೋಡಿದಾಗ ನನ್ನನ್ನು ಲೇಖಕಿಯನ್ನಾಗಿ ರೂಪುಗೊಳಿಸಿದ ಕೆಲವೊಂದು ಅಂಶಗಳು ಮಾತ್ರ ನನಗೆ ಕಾಣಿಸುತ್ತವೆ. ನನ್ನ ಪ್ರಜ್ಞೆಯ ಪರದೆಯಾಚೆಗೆ ನನ್ನ ಸಂವೇದನೆಯನ್ನು ಜಾಗೃತಗೊಳಿಸಿ ನನ್ನನ್ನು ಬರಹಕ್ಕೆ ಪ್ರೇರೇಪಿಸಿದ ಹಲವಾರು ಅಂಶಗಳು ಇದ್ದಿರಲೇಬೇಕು. ಸುಮಾರು ದಶಕಗಳ ಹಿಂದೆಯೇ ಬರವಣಿಗೆಯೇ ನನ್ನ ಜೀವನದ ಮಾರ್ಗ ಎಂದೆನಿಸಿದ್ದಿದೆ. ನಾನು ಬರಹಗಾರ್ತಿಯಾಗಬಲ್ಲೆನೆಂಬ ನಂಬಿಕೆ ನಿಜಕ್ಕೂ ನನಗಿತ್ತು. ಆದರೆ, ಯಾವ ವರ್ಷ ಅದು ರೂಪತಳೆಯಿತು ಎಂದು ಹೇಳಲಾರೆ.

**◆ ಅಂದರೆ?**

ನಾನು ಬೆಳೆದ ವಾತಾವರಣವೇ ಹಾಗಿತ್ತು. ಅದು ನನ್ನ ಸಂವೇದನೆಯನ್ನು ಬಡಿದೆಬ್ಬಿಸಿತ್ತು. ಉತ್ತರ ಪ್ರದೇಶದ ವಿವಿಧೆಡೆ ಬೆಳೆದೆ. ನಿರಂತರವಾಗಿ 'ಮುಶಾಹಿರ್'ಗಳಲ್ಲಿ 'ಕವಿ ಸಮ್ಮೇಳನ'ಗಳಲ್ಲಿ ಭಾಗವಹಿಸುತ್ತಿದ್ದೆ. ನನ್ನ ಅಪ್ಪ ಅಧಿಕಾರಿಯಾದರೂ ಮೂಲತಃ ಕತೆಗಾರ. ಸುಮಿತ್ರಾನಂದ ಪಂತ್ ಹಾಗೂ ರಘುಪತಿ ಸಹಾಯ್ ಫಿರಾಖಿಯಂತಹ ಸಾಹಿತ್ಯದ ದಿಗ್ಗಜರು ಮನೆಗೆ ಭೇಟಿ ನೀಡುತ್ತಿದ್ದರು. 'ಚಂದಮಾಮ' ರೀತಿಯ ಪತ್ರಿಕೆಗಳು ಯಾವಾಗಲೂ ಲಭ್ಯವಿರುತ್ತಿದ್ದವು. ಈ ಎಲ್ಲಾ ಬಗೆಯ ಸಂಪರ್ಕಗಳು ಭಾಷೆಯೊಂದಿಗಿನ ನನ್ನ ಅನುಸಂಧಾನವನ್ನು ಇನ್ನೂ ಉತ್ತಮಗೊಳಿಸಿದವು. ಹಿಂದಿ ಬಳಕೆ ನಿಷಿದ್ಧವಾಗಿದ್ದ ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಕಲಿತೆ. ನನಗನಿಸಿದಂತೆ, ಇವೆಲ್ಲಾ ನನ್ನನ್ನು ಹಿಂದಿ ಭಾಷೆಯ ಲೇಖಕಿಯನ್ನಾಗಿ ರೂಪಿಸಿರುವ ಸಾಧ್ಯತೆ ಇದೆ. ನನ್ನ ತಾಯಿಯಿಂದ ಹಿಂದಿ ನನಗೆ ಬಂದ ಬಳುವಳಿ. ಸುತ್ತಲೂ ಹಿಂದಿ ಭಾಷೆಯನ್ನೇ ಬಳಸುವ ಜನ. ಇದು ನನ್ನ ಮಾತೃಭಾಷೆ ಹಿಂದಿಯನ್ನು ಅತ್ಯುತ್ತಮವಾಗಿ ಹಾಗೂ ನಂಬಲರ್ಹ ರೀತಿಯಲ್ಲಿ ಕಲಿಯಲು ಸಹಕಾರಿಯಾಗಿತ್ತು. ಇವೆಲ್ಲ ಬರಹದ ಹಾದಿಯನ್ನು ಇನ್ನಷ್ಟು ಸುಗಮಗೊಳಿಸಿದವು.

**◆ ನೀವು ಓದಿದ್ದು ಇತಿಹಾಸ. ರಂಗಭೂಮಿಯ ಒಡನಾಟವೂ ಇತ್ತು. ಇವೆಲ್ಲ ಸಾಹಿತ್ಯದ ಸೂಕ್ಷ್ಮತೆಯನ್ನು ಹೇಗೆ ಒದಗಿಸಿದವು?**

ನಿಖರತೆ, ವಸ್ತುನಿಷ್ಠತೆ ಹಾಗೂ ಹಿನ್ನೆಲೆಯ ಮಹತ್ವವನ್ನು ಇತಿಹಾಸ ತಿಳಿಸಿಕೊಟ್ಟಿತು. ಆದರೆ, ಅದೆನ್ನೆಲ್ಲಾ ಮೀರಿದ ಸ್ವಾಂತ್ರ್ಯಕ್ಕಾಗಿ ನಾನು ಹಾತೊರೆಯುತ್ತಿದ್ದೆ. ಪದಗಳಲ್ಲಿ ದಾಖಲಿಸಲಾಗದ ಮಟ್ಟಿಗೆ ರಂಗಭೂಮಿಯಿಂದ ನಾನು ಪ್ರಭಾವಿತಳಾಗಿದ್ದೇನೆ. ಶಬ್ದಗಳಾಚೆಗಿನ ನೀರವತೆ, ಮೌನ, ಮಾತು–ಅರ್ಥಗಳ ಒಡನಾಟ ಮತ್ತು ಕೊನೆಗೊಳ್ಳುವಿಕೆಯ ಮಹತ್ವ ಅದರಿಂದ ನನಗೆ ಅರಿವಾಯಿತು. ಮಾತಿನ, ದನಿಯ ಏರಿಳಿತದ ಜಾಗೃತಿ ನನ್ನಲ್ಲಾಯಿತು. ರಂಗಭೂಮಿ ಎಲ್ಲದರ ಮಿಶ್ರಣ. ಹೀಗಾಗಿ, ಅದು ನನ್ನೊಳಗಿನ ಲೇಖಕಿಯನ್ನು ಬಡಿದೆಬ್ಬಿಸಿತು.

**◆ 'ರೇತ್ ಸಮಾಧಿ' ಹೇಗೆ ರೂಪಗೊಂಡಿತು?**

ಬದುಕಿಗೆ ಬೆನ್ನು ತೋರಿಸಿ ಮಲಗಿದ ಒಬ್ಬ ವಯಸ್ಸಾದ ವಿಧವೆಯ ಚಿತ್ರವನ್ನು ಒಮ್ಮೆ ನೋಡಿದೆ. ಆ ಚಿತ್ರ ನನ್ನಲ್ಲಿ ಕುತೂಹಲ ಮೂಡಿಸಿತು. ಅದು ಸೂಚಿಸುವುದಾದರೂ ಏನನ್ನು? ಆಕೆ ಯಾವುದರಿಂದ ವಿಮುಖಗೊಂಡಿದ್ದಾಳೆ? ಆಕೆ ನಿರೀಕ್ಷಿಸುತ್ತಿರುವುದಾದರೂ ಏನು? ಸಾವನ್ನು? ಹೊಸ ಹುಟ್ಟನ್ನು? ಈ ಪ್ರಶ್ನೆಗಳಿಂದ ಮೂಡುತ್ತಾ ಹೋದ ನನ್ನ ಆಲೋಚನಾ ಲಹರಿ ಮುಂದೆ ಕಾದಂಬರಿಯಾಗಿ ಬದಲಾಯಿತು.

**◆ ಈ ಕೃತಿ ನಿಮ್ಮಿಂದ ಹೊರಬರಲು ಏಳು ವರ್ಷ ಬೇಕಾಯಿತಲ್ಲವೆ?**

ಕೃತಿಗೆ ಒಂದು ಚಲನೆಯಿರುತ್ತದೆ. ಕೃತಿಕಾರನಿಗೆ ಆ ಚಲನೆ ಹಾಗೂ ಘಟ್ಟದಿಂದ ಯಾವಾಗ ವಿಮೋಚನೆಗೊಳ್ಳಬೇಕೆಂದು ಆ ಕೃತಿಯೆ ಕೃತಿಕಾರನಿಗೆ ತಿಳಿಸುತ್ತದೆ. ಆ ರೀತಿ 'ರೇತ್ ಸಮಾಧಿ' ಮುಗಿಯಲು